ನಾಲಿಗೆಯ ಮೇಲಿಟ್ಟಾಗ ಅದು ಕರಗಿ ನೀಡುವ ರುಚಿಯನ್ನು ಹೇಗೆ ವರ್ಣಿಸಲು ಸಾಧ್ಯವಿಲ್ಲವೋ, ಹಾಗೆ ಈ ಸ್ಪರ್ಶ ಸುಖವನ್ನು ಬಣ್ಣಿಸಲು ಸಾಧ್ಯವಿಲ್ಲ. ಆಕೆಯ ಬಿಗಿತಕ್ಕೆ ಆತ ಸಡಿಲುಗೊಂಡ. ಅದರಗಳು ಜಿನುಗು ಒದ್ದೆ. ಕೈಬೆರಳಗಳು ಹತ್ತು ಇಪ್ಪತ್ತಾದವು. ಕ್ಷಣಗಳಲ್ಲಿ ಅವಳ ಬಟ್ಟೆ ನೆಲಕ್ಕಚ್ಚಿತು. ಈತನದ್ದೂ. ಆಕೆ ದಿಗಂಬರೆ. ಅರೆ ಬೆಳಕು ಕತ್ತಲೆ. ಆ ನಜರಿನಲ್ಲಿ ಶಿಲ್ಪಿ ಕಟೆದ ಶಿಲೆಯಂತೆ ಕಂಡಳು. ಸಿದರಾಯನ ಗುಡಿಯ ನಗಾರಿ ಬಾರಿಸತೊಡಗಿತು. ಆ ನಿನಾದದಲ್ಲಿ ಆಕೆಯ ಮುಲುಕಾಟ ಕರಗಿತು. ರೂಪಾ ರೂಹುಗಳಾಚೆ ಬೆಳಗುತ್ತಿದ್ದಳು. ಬುಗುಟೆ ಆಕಾರವು ಬೆಚ್ಚಗಿನ ಶಾಖಕ್ಕೆ ಮೆತ್ತಗಾಯಿತು. ಹೊಕ್ಕುಳು ಹೂ ಮತ್ತು ಅದರ ಕೆಳಗಿನ ಚಿನ್ನದ ಎಳೆ ರೋಮಗಳು. ಗುಲಾಬಿ ಹೂ ದೇಟಿಗೆ ಚುಚ್ಚದ ಮುಳ್ಳುಗಳಂತೆ ಕಂಗೊಳಿಸುತ್ತಿದ್ದವು. ಆತ ಕೇವಲ ಹೂವನ್ನು ಆಘ್ರಾಣಿಸಿದ. ಆ ಪರಿಮಳದ ಗುಂಗಿನ ನಶೆಗೆ ಒಳಗಾದ. ಆದರೆ ಮಕರಂದ ಹೀರಲಿಲ್ಲ. ನಗಾರಿ ನಿಂತಿತು, ಎತ್ತುಗಳ ಗೊಗರಿ ಚಾಳ ಸದ್ದು ಕೇಳಿತು. ಶೇಂಗಾ ತುಂಬಿಕೊಂಡ ಚಕ್ಕಡಿ ಬಂದುದರ ಸನ್ನೆಯಾಗಿತ್ತು. ತಟ್ಟನೆ ಆಕೆ ಬಟ್ಟೆ ತೊಟ್ಟು ಹಿತ್ತಲಿಗೆ ಜಾರಿದಳು.

* * *

ಸುಭದ್ರ ವೈನಿಯವರ ಮಮತೆ ದೊಡ್ಡದು. ಓಣಿಯವರೆಲ್ಲ ಸುಭದ್ರರನ್ನು 'ವೈನಿ' ಎಂದೇ ಸಂಬೋಧಿಸುತ್ತಿದ್ದರು. ರೂಪಾ ಬಂದಾಗಲೆಲ್ಲ ಬಸೂಗೆ ಕರೆಯಿಸುತ್ತಿದ್ದರು. ಬ್ಯಾಂಕ್ ಮತ್ತು ಸ್ಥಳೀಯ ಕಚೇರಿಯ ಕೆಲಸ ಹಚ್ಚುತ್ತಿದ್ದರು. ಹಳ್ಳಿಗಳಲ್ಲಿ ಬಸೂನ ವಾರಿಗೆಯವರಷ್ಟೆ ಯಾಕೆ ಸಲುಗೆಯಿದ್ದವರಿಗೆಲ್ಲ ಇದು ಸಾಮಾನ್ಯ ಅನುಭವ. ಸುಭದ್ರಳ ಗಂಡ ವೀರಭದ್ರ. ಸೊಕ್ಕಿದ ಗೂಳಿ ಹಾಗಿದ್ದ. ಕೊಲ್ಲಾಪುರದಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದ. ಎಮ್.ಕಾಮ್ ಮಾಡಿದ್ದ. ಸುಳಕೋಡದಿಂದ ಹೋಗಿ ಬಂದು ಮಾಡುವವ. ಆದಕಾರಣ ವೈನಿಯವರ ವಾಸ್ತವ್ಯ ಬೆಡಗಿನಹಳ್ಳಿಗಿಂತ ಅಧಿಕವಾಗಿ ಸುಳಕೋಡದಲ್ಲಿರುತ್ತಿತ್ತು. ಮನೆ ಅಳಿಯ, ಮನೆಮಗನಂತಿದ್ದ. ಮಾತು ಇಲ್ಲ. ಏನೇ ನುಡಿದರೂ ವ್ಯವಹಾರದ ಶಲಾಕೆಯಂತೆ ವರ್ತಕ ನೆಚ್ಚಿ ಅಹುದಹುದೆನುವಂತೆ! ಗುಂಬ ಬಾವಿ ಒಳಗೆ ಕಲ್ಲೊಗೆದರೂ ಆಳ ಅರಿವಿಗೆ ಬರದಂತೆ - ಹೀಗೆ ಅಂದಾಜು ಗೊತ್ತಾಗದಂತಿರುವ ಪ್ರಾಣಿ ಈ ವೀರಭದ್ರ! ಈ ಗಂಟು ಮುಖದವನನ್ನು ಹಚ್ಚಿಕೊಳ್ಳುವ ಸ್ವಭಾವದ ಸುಭದ್ರ ಅದು ಹೇಗೆ ಮದುವೆಯಾದಳೋ!

ಸುಭದ್ರ ವೈನಿ, ಸರಿತಕ್ಕರ ಆಗ್ರಹಕ್ಕೋ, ರೂಪಾಳನ್ನು ನೋಡಲೋ ಹಲವು ಬಾರಿ ಬಸವರಾಜ ಸುಳಕೋಡಕ್ಕೆ ಹೋಗಿದ್ದ. ಹೋಗಲು ತೀವ್ರ ಕಾರಣ ರೂಪಾ. ನಗಾರಿ ಗುಣಿಕೆ ಸದ್ದಿನ ಆ ಸಂಜೆಯಿಂದ ರೂಪಾ ಬಸವರಾಜನಿಗೆ ಹೃದಯಕ್ಕೆ ಹತ್ತಿರವಾಗಿದ್ದಳು.

ಬಸೂ ಸುಳಕೋಡಕ್ಕೆ ಹೋದಾಗಲೆಲ್ಲ ಬಹುತಾಂಶ ಸಂಜೆ ಸಮಯವೇ ಆಗಿರುತ್ತಿತ್ತು. ಒಬ್ಬೊಬ್ಬರು ಅವರವರ ಕಾಲದನುಸಾರ ತಮ್ಮ ತಮ್ಮ ಕಾರ್ಯಕ್ಷೇತ್ರಗಳಿಂದ ಹಕ್ಕಿಗಳು ಮರಳಿ ಗೂಡು ಸೇರಿದಂತೆ ಬಂದು ಟಪಕಾಯಿಸುತ್ತಿದ್ದರು. ಬಸೂ ಎದುರು ಬಂದಾಗ, 'ಯಾನ್ಯಾನ? ಯಾವಾಗ ಬಂದಿ? ಎಲ್ಲಾ ಠೀಕ ಐತಿ!..' ಎಂಬುಲಿವು ಬಿಟ್ಟರೆ ಮತ್ತೊಂದು ಮಾತಿಲ್ಲ. ಒಮ್ಮೊಮ್ಮೆ ಊಟಕ್ಕೆ ಕುಳಿತಾಗಲೂ ಚಪ್ಪರಿಸುವ ಸದ್ದೊ, ಸೊರ್ ಸೊರ್ ಎಂಬ ಸುರಕೊಳ್ಳುವ ಶಬುದ ಬಿಟ್ಟರೆ ಮೌನವೇ ತಾಂಡವವಾಡುತ್ತಿತ್ತು. ಬಸೂನೇ ಮೈಮೇಲೆ ಬಿದ್ದು ಮಾತಾಡಿಸಿ ಅವರ ನುಡಿ ಹೊಮ್ಮಿಸಬೇಕು. ಇದು ಆತನಿಗೆ ಆಗದ ಕೆಲಸ. ಒಮ್ಮೊಮ್ಮೆ ಯತ್ನಿಸಿದರೆ ಬಲು ಹಿಂಸೆಯ ಕಸರತ್ತು ಅನಿಸುತ್ತಿತ್ತು. ಆದರೆ ಶ್ರೀಶೈಲ ತದ್ವಿರುದ್ಧ. ಅವನಿದ್ದರೆ ಮನೆಯಲ್ಲಿ ಜೀವಂತಿಕೆ. ಮಾತಿನ ಮಲ್ಲ. ಬಸೂನನ್ನು, 'ಚಲಾ ಅಣ್ಣಾರಿ ಜಾವೂಯಾ...' ಅಂತ ಹಲವು ಬಾರಿ ಕೊಲ್ಲಾಪುರಕ್ಕೆ ಕರೆದುಕೊಂಡು ಹೋದದ್ದೂ ಇದೆ. ಬೀರು ಬಾರು, ಒಪಲ್ ನ ಮಟನ್ ಊಟ! ಪಾಂಡರಾ ರಸ್ಸಾ, ತಾಂಬಡಾ ರಸ್ಸಾ! ಆಹಾ! ಈ ಬಿಸಿ ಬಿಸಿ ಸೇರವಾ ಸುರಕೊಂಡ ಕುಡಿಯುವ ಅನುಭವ ಅನನ್ಯ.

ಸರಿತಕ್ಕ ಮತ್ತು ಅವರ ಅತ್ತೆ ಮನಸ್ಸು ಬಿಚ್ಚಿ ಮಾತನಾಡುತ್ತಿದ್ದರು. ಸರಿತಕ್ಕಳಂತೂ ಬೆಡಗಿನಹಳ್ಳಿಯವಳೇ ಅಲ್ಲವೇ? ತವರು ನೆಲದ ಕಕ್ಕುಲಾತಿಯಿತ್ತು. ಬಸೂನ ಮನಗಂಡ ಮಾತನಾಡಿಸುತ್ತಿದ್ದಳು. ಆದರೆ ರೂಪಾನ ಕುರಿತು ಅವಳ ಮನದಲ್ಲಿ ಏನಿದೆಯೋ ಸುಳಿವು ಇರಲಿಲ್ಲ. ಒಮ್ಮೆ ರೂಪಾಳ ಅಮ್ಮ ಯಾರದೊ ಸಂಗಡ ಮಾತಾಡಿದ್ದನ್ನು ರೂಪಾ ಕೇಳಿಸಿಕೊಂಡಿದ್ದುಂಟು.